# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿವಿಧ ಜಿಲ್ಲಾ/ತಾಲ್ಲೂಕು ಪಂಚಾಯತಿಗಳ ಮತ್ತು ಅವುಗಳ ವ್ಯಾಪ್ತಿಯ ಶಿಕ್ಷಣ, ಸಮಾಜ ಕಲ್ಯಾಣ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಬಾಕಿ ವೇತನ ವೆಚ್ಚಕ್ಕಾಗಿ ಹಾಗೂ ದಿನಗೂಲಿ ನೌಕರರ ವೇತನ/ಒಂದು ಬಾರಿಯ ಉಪಧನಕ್ಕಾಗಿ ಕೊರತೆಯಾಗಿರುವ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ

**ಓದಲಾಗಿದೆ:**

1. ಸುತ್ತೋಲೆ ಸಂಖ್ಯೆ: ಆಇ 01 ಜಿಪಅ 2014 ದಿನಾಂಕ:1.2.2014
2. ಆರ್ಥಿಕ ಇಲಾಖೆ ವೆಚ್ಚ 3, 5 ಮತ್ತು 8 ಶಾಖೆಯ ಕಡತಗಳು

**ಪ್ರಸ್ತಾವನೆ:**

ವಿವಿಧ ಜಿಲ್ಲಾ ಪಂಚಾಯತಿಗಳ ವ್ಯಾಪ್ತಿಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ದಿನಗೂಲಿ ನೌಕರರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯವರ ವೇತನ ವೆಚ್ಚಕ್ಕಾಗಿ ರೂ.61.44ಲಕ್ಷ ಮತ್ತು 2020-21ರವರೆಗೆ ದಿನಗೂಲಿ ನೌಕರರಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತಿ ಹೊಂದಿದ ಹಾಗೂ ಸೇವೆಯಲ್ಲಿರುವಾಗಲೇ ಮೃತರಾದ ಸಿಬ್ಬಂದಿಯವರುಗಳ ಒಂದು ಬಾರಿಯ ಉಪಧನಕ್ಕಾಗಿ ರೂ.77.22ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 2225-00-103-0-39-033 ಮತ್ತು 251ರಡಿ ಒದಗಿಸಲು ಪ್ರಸ್ತಾವಿಸಿದೆ.

ಬೆಳಗಾವಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸವದತ್ತಿ ತಾಲ್ಲೂಕು ಹಂಚನಾಳ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಹಾಯಕ ಆಯುಷ್ ವೈದ್ಯಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವ ಡಾ:ಆರ್.ಎಸ್.ಬಶೆಟ್ಟಿ ಇವರಿಗೆ 2013ರಿಂದ ಪೂರ್ವಾನ್ವಯವಾಗಿ ಕಾಲಬದ್ಧ ಮುಂಬಡ್ತಿಯ ವೇತನವನ್ನು ನಿಗಧಿಪಡಿಸಿ ಮಹಾಲೇಖಪಾಲರು ಪೇಸ್ಲಿಪ್ ನೀಡಿರುವುದರಿಂದ ಬಾಕಿ ವೇತನಕ್ಕಾಗಿ ರೂ.16.08ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 2210-00-101-0-29-005ರಡಿ ಒದಗಿಸಲು ಪ್ರಸ್ತಾವಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 336 ಎಲ್.ಬಿ.ಪಿ. 2017 ದಿನಾಂಕ:9.11.2018ರನ್ವಯ ವಿಜಯಪುರ ಜಿಲ್ಲೆ ಸಿಂಧಗಿ ತಾಲ್ಲೂಕು ಆಲಮೇಲದಲ್ಲಿನ ಡಾ: ಭೀಮರಾವ್ ಎಜುಕೇಷನ್ ಅಸೋಸಿಯೇಷನ್ನ ಪ್ರೌಢಶಾಲೆಯನ್ನು ಸರ್ಕಾರದ ಸಹಾಯಾನುದಾನದಡಿ ಸೇರ್ಪಡೆಗೊಳಿಸಿದ್ದು ಸದರಿ ಶಾಲೆಯ 9 ಬೋಧಕ/ಬೋಧಕೇತರ ಸಿಬ್ಬಂದಿಯವರ ನವಂಬರ್ 2018 ರಿಂದ ಮಾರ್ಚ್ 2019ರವರೆಗಿನ ಬಾಕಿ ವೇತನ ವೆಚ್ಚಕ್ಕಾಗಿ ರೂ.15.58ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 2202-00-102-0-18-101ರಡಿ ಒದಗಿಸಲು ಪ್ರಸ್ತಾವಿಸಿದೆ.

ಮೇಲ್ಕಂಡಂತೆ ಪ್ರಧಾನ ಲೆಕ್ಕ ಶೀರ್ಷಿಕೆ 2225ರಡಿ ರೂ.138..66ಲಕ್ಷ, ಪ್ರಧಾನ ಲೆಕ್ಕ ಶೀರ್ಷಿಕೆ 2210ರಡಿ ರೂ.16.08ಲಕ್ಷ ಮತ್ತು ಪ್ರಧಾನ ಲೆಕ್ಕ ಶೀರ್ಷಿಕೆ 2202ರಡಿ 15.58ಲಕ್ಷ ಒಟ್ಟು ರೂ.171.32ಲಕ್ಷಗಳನ್ನು ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳಡಿ ಹೆಚ್ಚುವರಿ ಒದಗಿಸಿ ಬಿಡುಗಡೆಗೊಳಿಸಲು ಪ್ರಸ್ತಾವಿಸಿದೆ. ಪ್ರಸ್ತಾವನೆಯನ್ನು ಪರಿಶೀಲಿಸಿ ಹೆಚ್ಚುವರಿ ಪ್ರಸ್ತಾವಿಸಿರುವ ಅನುದಾನವನ್ನು ಲೆಕ್ಕ ಶೀರ್ಷಿಕೆ ಲೆಕ್ಕ ಶೀರ್ಷಿಕೆ 2515-00-196-1-05-300ರಡಿ ಬಿಡುಗಡೆಗೊಳಿಸಲು ನಿರ್ಣಯಿಸಿ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಆಇ 489 ವೆಚ್ಚ 6/2020(ಇ) ದಿನಾಂಕ: 23ನೇ ಡಿಸೆಂಬರ್ 2020

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದ ಕಾಲಂ 2ರ ಜಿಲ್ಲಾ/ತಾಲ್ಲೂಕು ಪಂಚಾಯತಿಗಳಿಗೆ ಕಾಲಂ 3 ಕಾರ್ಯಕ್ರಮದಡಿ ಬಾಕಿ/ಪ್ರಸಕ್ತ ಸಾಲಿನ ವೇತನ/ಸಂಭಾವನೆ ವೆಚ್ಚಕ್ಕಾಗಿ ಅಗತ್ಯವಿರುವ ಅನುದಾನವನ್ನು ಕಾಲಂ 4 ಮತ್ತು 5ರ ಲೆಕ್ಕ ಶೀರ್ಷಿಕೆಯಡಿ ಕಾಲಂ 6ರ ಒಟ್ಟು ರೂ170.32ಲಕ್ಷ (ರೂಪಾಯಿ ಒಂದು ನೂರ ಎಪ್ಪತ್ತು ಲಕ್ಷದ ಮೂವತ್ತೆರಡು ಸಾವಿರಗಳು ಮಾತ್ರ) ಗಳನ್ನು ಬಿಡುಗಡೆಗೊಳಿಸಿದೆ. ಈ ರೀತಿ ಬಿಡುಗಡೆಗೊಳಿಸಿದ ಅನುದಾನವನ್ನು ಮೇಲೆ (1) ರಲ್ಲಿ ಓದಲಾದ ಸುತ್ತೋಲೆಯಲ್ಲಿ ನೀಡಿರುವ ನಿರ್ದೇಶನದಂತೆ ಕ್ರಮವಹಿಸಿ ಬಿಲ್ಲುಗಳ ತೀರುವಳಿಗೆ ಕ್ರಮವಹಿಸತಕ್ಕದ್ದು. ಪ್ರಸ್ತುತ ಪ್ರಕರಣಕ್ಕೆ ಆರ್ಥಿಕ ಇಲಾಖೆ ಮರುಹೊಂದಾಣಿಕೆಗೆ ಸಹಮತಿಸಿದೆ ಎಂದು ಭಾವಿಸತಕ್ಕದ್ದು.

(ಸೂಚನೆ: ಬಿಡುಗಡೆಗೊಳಿಸಿರುವ ಅನುದಾನವನ್ನು ನಿಧಿ-2ಕ್ಕೆ ಜಮೆ ಮಾಡಿಕೊಂಡು, ನಂತರ ಸಂಬಂಧಪಟ್ಟ ಜಿಲ್ಲಾ ಪಂಚಾಯತಿ ಮುಖ್ಯಲೆಕ್ಕಾಧಿಕಾರಿಗಳು ಮರು ಹೊಂದಾಣಿಕೆ ಆದೇಶವನ್ನು ಈ ಕೆಳಗಿನ ಅಧಿಕಾರಿಗಳಿಗೆ ಸುತ್ತೋಲೆರನ್ವಯ ಪ್ರಸ್ತಾವನೆ ಆರ್ಥಿಕ ಇಲಾಖೆಗೆ ಸಲ್ಲಿಸಿ ಖಜಾನೆಯಲ್ಲಿ ಅಪ್ ಲೋಡ್ ಮಾಡಿಕೊಳ್ಳುವುದು.)

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಆರ್ಥಿಕ ಇಲಾಖೆ ವೆಚ್ಚ ಶಾಖೆಯ ಕಡತ ಸಂಖ್ಯೆ | ಜಿಲ್ಲಾ ಪಂಚಾಯತ್ | ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ | | | | ಲೆಕ್ಕ ಶೀರ್ಷಿಕೆ 2515-00-196-1-05-300ರಡಿ ಬಿಡುಗಡೆಗೊಳಿಸಿದ ಒಟ್ಟು ಅನುದಾನ |
|---|---|---|---|---|---|---|---|
| | | | 2225-00-103-0-39-033 | 2225-00-103-0-39-251 | 2210-00-101-0-29-005 | 2202-00-102-0-28-101 | |
| 1 | ಆಇ 602 ವೆಚ್ಚ 5/2020(ಇ) | ಬೆಳಗಾವಿ | | | 16.08 | | 16.08 |
| 2 | ಆಇ 442 ವೆಚ್ಚ 8/2020(ಇ) | ವಿಜಯಪುರ | | | | 15.58 | 15.58 |
| 3 | ಆಇ 481 ವೆಚ್ಚ 3/2020 (ಇ) | ಬಳ್ಳಾರಿ | 13.15 | 13.68 | | | 26.83 |
| | | ವಿಜಯಪುರ | 2.73 | 5.06 | | | 7.79 |
| | | ಬಾಗಲಕೋಟೆ | 5.03 | | | | 5.03 |
| | | ಚಾಮರಾಜನಗರ | | 14.27 | | | 14.27 |
| | | ದಾವಣಗೆರೆ | | 16.29 | | | 16.29 |
| | | ಹಾಸನ | 15.56 | 6.28 | | | 21.84 |
| | | ಕಲಬುರಗಿ | | 1.79 | | | 1.79 |
| | | ಕೋಲಾರ | 0.2 | 8.32 | | | 8.52 |
| | | ಕೊಡಗು | 11.42 | | | | 11.42 |
| | | ಮೈಸೂರು | 8.33 | 4.27 | | | 12.6 |
| | | ಶಿವಮೊಗ್ಗ | 5.02 | 7.26 | | | 12.28 |
| | | **ಒಟ್ಟು** | **61.44** | **77.22** | **16.08** | **15.58** | **170.32** |

ಈ ಕಾರ್ಯವನ್ನು ಆದ್ಯತೆಯ ಮೇಲೆ ಕ್ರಮವಹಿಸತಕ್ಕದ್ದು, ಯಾವುದೇ ಹಂತದಲ್ಲಿ ಅಂದರೆ ಜಿಲ್ಲಾ ಪಂಚಾಯತಿ ಅಥವಾ ಅನುಷ್ಠಾನಾಧಿಕಾರಿಗಳ ಹಂತದಲ್ಲಿ ವಿಳಂಬವಾಗಿ ಅನುದಾನ ವ್ಯಪಗತವಾದಲ್ಲಿ ಮತ್ತೊಮ್ಮೆ ಅನುದಾನವನ್ನು ಒದಗಿಸುವುದಿಲ್ಲವೆಂದು ಮತ್ತು ವಿಳಂಬಗೊಳಿಸಿದ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಕ್ರಮವಹಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಪುರುಷೋತ್ತಮ್ ಸಿಂಗ್ ಬಿ.ಹೆಚ್.)
ವಿಶೇಷಾಧಿಕಾರಿ(ಜಿ.ಪಂ.) ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ

1. ಮಹಾಲೇಖಪಾಲರು(ಎ&ಇ) ಲೆಕ್ಕ ಪರಿಶೋಧನೆ 1 & 2, ಕರ್ನಾಟಕ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಖಜಾನೆ-2, 7ನೇ ಮಹಡಿ, ವಾಣಿಜ್ಯ ತೆರಿಗೆ ಕಟ್ಟಡ, ಗಾಂಧಿನಗರ, ಬೆಂಗಳೂರು-2ರವರಿಗೆ
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಸಮಾಜ ಕಲ್ಯಾಣ/ಶಿಕ್ಷಣ/ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
4. ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು
5. ಜಂಟಿ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
6. ಸಂಬಂಧಿಸಿದ ಜಿಲ್ಲಾ/ಉಪ ಖಜಾನಾಧಿಕಾರಿಗಳು 7.ರಕ್ಷಾ ಕಡತಕ್ಕೆ/ ಹೆಚ್ಚುವರಿ ಪ್ರತಿ